ಬರುವ ಜಿಲ್ಲಾಧಿಕಾರಿಯಾಗುವುದು ಗ್ಯಾರಂಟಿ' ಎಂಬಂತೆ ನನ್ನತ್ತ ಕನಸುಗಣ್ಣಿನಲ್ಲಿ ನೋಡುತ್ತಿದ್ದ ದೃಶ್ಯ ಈಗಲೂ ನನ್ನ ಕಣ್ಣಿಗೆ ಕಟ್ಟಿದೆ. ನೆನಪುಗಳೇ ಹಾಗೆ! ಅದೇ ಆಗ ಫೌಂಟನ್ ಪೆನ್ನನ್ನು ಹಿಂದೆ ಹಾಕಿ ಈ ಬಾಲ್ ಪೆನ್ನು ಮಾರುಕಟ್ಟೆಗೆ ಪ್ರವೇಶ ಮಾಡಿದ್ದು. ಬರೆಯುವ ಜಗತ್ತಿನಲ್ಲಿ ಮತ್ತೊಂದು ಕ್ರಾಂತಿಯನ್ನು ಮಾಡಿತ್ತು. ಆಗಿನ್ನೂ ನಿರುದ್ಯೋಗಿಯಾಗಿದ್ದ ನಾನು ಸಂತೆಯಲ್ಲಿ ಮಾರುವ ಕೈಗೆಟುಕಿದ ಅಗ್ಗದ ಬಾಲ್ ಪೆನ್ನು ಕೊಂಡು ಎದೆಯ ಕಿಸೆಗೆ ಸೇರಿಸಿಕೊಂಡಿದ್ದೆ ಬಂತು. ಕೆಲವು ದಿನಗಳಲ್ಲಿ ಅದು ಕೂಸು ಚಡ್ಡಿ ಒದ್ದೆ ಮಾಡಿಕೊಂಡಂತೇ ಥೇಟು ನನ್ನ ಕಿಸೆಯ ಮೂಲೆಯಲ್ಲಿ ಶಾಯಿ ಒಸರಿ ಒಸರಿ ಎಷ್ಟು ತೊಳೆದರು ಹೋಗದ ಶಾಶ್ವತ ಕಲೆ ಉಂಟು ಮಾಡಿ ಬಿಮ್ಮನೇ ಬೀಗುತ್ತಿತ್ತು ಬಲ್ಲಿರಾ!

ಆರಂಭದಲ್ಲಿಯೇ ಪ್ರಸ್ತಾಪಿಸಿದಂತೆ ನಾನು ಹುಟ್ಟಾ ಪೆನ್ನು ಪಕ್ಷಪಾತಿಯಾಗಿದ್ದಕ್ಕೇನೊ, ಎದೆ ಜೇಬಿಗೆ ಬರೀ ಪೆನ್ನು ಸಿಕ್ಕಿಸಿಕೊಂಡು ತಿರುಗುವ ಶೋಕಿಲಾಲನಾಗಿ ಉಳಿಯದೆ, ಮನಸ್ಸಿನೊಳಗಿನ್ನೂ ಬರೆಯಬೇಕೆನ್ನುವ ಉಮೇದು ಗುದ್ದಿಕೊಂಡು ಬರುವಾಗ ಅದಕ್ಕೆ ತಕ್ಕಂತೆ ಕೊಳ್ಳುವ ಸಾಮರ್ಥ್ಯವಿರುವಾಗ, ಬೆಲೆ ಬಾಳುವ ವಾಟರ್‌ಮ್ಯಾನ್ ಮತ್ತು ಪಾರ್ಕರ್ ಕಂಪನಿಗಳ ದುಬಾರಿ ಪೆನ್ನುಗಳಿಗೇ ಕೈಯಿಕ್ಕಿದೆ. ಬರೆಯುವ ಪೆನ್ನುಗಳ ಸಂಬಂಧದಲ್ಲಿ ಕ್ರಾಂತಿಯಾದಂತೆ, ಈಗ ಐವತ್ತು ಪೈಸೆಯಿಂದ ಲಕ್ಷಗಟ್ಟಲೇ ರೂಪಾಯಿ ಬೆಲೆಬಾಳುವ ಪೆನ್ನುಗಳು ಮಾರುಕಟ್ಟೆಯಲ್ಲಿ ಕೈ ಮಾಡಿ ಕರೆಯುತ್ತಿವೆಯೇನೋ ನಿಜ. ನನ್ನಂಥ ಮಧ್ಯಮ ವರ್ಗದ ಬರಹಗಾರನಿಗೆ ಆರೇಳು ನೂರು ರೂಪಾಯಿ ಬೆಲೆ ಬಾಳುವ ಪೆನ್ನೆ ಸಾಕಿತ್ತು.

ಜೀವನದುದ್ದಕ್ಕೂ ಅಗ್ಗದ ಬಾಲ್ ಪೆನ್ನು ಕೊಳ್ಳುವುದು, ಅದು ಭೇದಿ ಕಿತ್ತಂತೆ ಕಿಸೆಯಲ್ಲಿ ಶಾಶ್ವತ ಕಲೆ ಉಂಟು ಮಾಡುವುದಕ್ಕೆ ಬೇಸತ್ತು, ಈಗ ಈ ದುಬಾರಿ ಪೆನ್ನಿಗೆ ತೆಕ್ಕೆ ಬಿದ್ದದ್ದು. ಅದರ ಹೊಟ್ಟೆಯಲ್ಲಡಗಿದ ರೀಫಿಲ್ಲು, ಅಲ್ಟ್ರಾ ಫೈನ್-ನೇವಿಗೇಟರ್ ತಂತ್ರಜ್ಞಾನವಂತೆ. ಪಿಂಚಣಿದಾರನಾದ ನನ್ನನ್ನು ಸರಕಾರವೇ ಸಾಕುತ್ತಿರುವುದರಿಂದ-ಒಂದು ಕೈ ಯಾಕೆ ನೋಡಬಾರದೆಂದುಕೊಂಡು ಮನೆಯಾಕೆಗೆ ಸುಳಿವು ಸಿಗದಂತೆ ದುಬಾರಿ ಪೆನ್ನು ಖರೀದಿಸಿ ಎದೆಗೇರಿಸಿಕೊಂಡೆ. ನೆನಪಾದಾಗಲೆಲ್ಲ ಅಂಗೈಯಲ್ಲಿ ಗೀಚಿಕೊಂಡು ಪುಳಕಗೊಂಡೆ. ಮೊದಲೇ ಮನೆಯಾಕೆಯೊಂದಿಗೆ ರಾಜೀ ಮಾಡಿಕೊಂಡಿದ್ದೇನೆ – ನನ್ನ ಸುಖಕ್ಕೆ ನೀನು ಅಡ್ಡಿ ಬರಕೂಡದು, ನಿನ್ನ ಸುಖಕ್ಕೆ ನಾನು ಅಡ್ಡಿ ಬರುವುದಿಲ್ಲ ಎಂದು. ಅರವತ್ತು ಮೀರಿದ ಮಂದಿಗೆ ಅನುಮಾನ ಪಡಲು ಏನಿರುತ್ತದೆ ಅಲ್ಲಿ ಮಣ್ಣು!

ಮೊದಲ ಬಾರಿಗೆ ಫಳಫಳ ಹೊಳೆಯುವ ಬೂಟು ತೊಟ್ಟು ನಡೆದಾಗ, ರಸ್ತೆಯಲ್ಲಿ ಕಣ್ಣಿಗೆ ಬೀಳುವ ಬೂಟುಗಾಲುಗಳನ್ನೇ ನೋಡಿ ಹೋಲಿಸುವುದು ನನ್ನ ಸುಮಾರು ಚಾಳಿಯಾಗಿತ್ತು. ಇದೂ 'ಮಿಡಲ್ ಕ್ಲಾಸ್ ಮೆಂಟ್ಯಾಲಿಟಿ' ಎಂದು ನೀವು ಮೂಗು ಮುರಿದರೂ ಪರವಾಗಿಲ್ಲ! ಬಡತನದಿಂದ ಮಧ್ಯಮ ವರ್ಗಕ್ಕೆ ಬಡತಿ ಹೊಂದಿದವರೇ ಎಲ್ಲ ನಮೂನೆಯ ಸುಖ ಅನುಭವಿಸುವುದು. ಬಂಗಲೆಗಳಲ್ಲಿ ಹುಟ್ಟಿ ಬೆಳೆದವರಿಗೆಲ್ಲಿದೆ ಆ ಅವಕಾಶ- ಎಲ್ಲ ಸ್ಟೀರಿಯೋಟೈಪು. 'ಕೋಣೆ ಮಕ್ಕಳು ಕೊಳೆತೊ, ಬೀದಿ ಮಕ್ಕಳು ಬೆಳೆದೊ' ಗಾದೆಯೇ ಇದೆಯಲ್ಲ!

ಮಾನ್ಯ ವಾಚಕರೆ, ಕ್ಷಮಿಸಬೇಕು. ಇದೆಂಥಾ ಹುಚ್ಚು ಇವನಿಗೆ ಎನ್ನಬೇಡಿರಿ. ಹುಚ್ಚಿದ್ದರೇನೇ ಮನುಷ್ಯನಿಗೆ ಏನನ್ನಾದರೂ ಸಾಧಿಸುವ ಛಲವಿರುವುದೆಂದು ಮನೋವಿಜ್ಞಾನ ಹೇಳುತ್ತದೆ. ಜೀವನದಲ್ಲಿ ಎಂಥ ಆಘಾತಗಳಾದರೂ ಸಹಿಸಿಕೊಳ್ಳುವುದು ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಮಧ್ಯಮ ವರ್ಗದ ಮಂದಿಗೆ ಮಾತ್ರ ಸಾಧ್ಯವೆಂಬುದು ನನ್ನ ಅನುಭವ. ಮಾತಿಗೆ ತೊಡಗಲಾರೆ. ಮತ್ತೆ ಪೆನ್ನು ಹಿಡಿಯುತ್ತೇನೆ ಬನ್ನಿರಿ.

ಅಂದಹಾಗೆ, ನನ್ನ ಈ ನೇವಿಗೇಟರ್ ತಂತ್ರಜ್ಞಾನದ ಪೆನ್ನಿನೊಂದಿಗೆ ಬೆಂಗಳೂರಿನ ನಗರ ಸಾರಿಗೆ ಬಸ್ ನಿಲ್ದಾಣದಲ್ಲಿ ಒಮ್ಮೆ ಕಾದು ನಿಂತಿದ್ದಾಗ ನಡೆದ ದುರ್ಘಟನೆ. ಅಲ್ಲೇ ಇದ್ದ ಅಮಾಯಕನೊಬ್ಬ 'ಒಂಚೂರು ಪೆನ್ನು ಕೊಡಿ ಸಾರ್. ಅಡ್ರೆಸ್ ಬರೆಯಬೇಕು' ಎಂದ. ವಿಧಿಯಿಲ್ಲದೆ ಕೊಟ್ಟೆ. ಆತ ತುಸು ದೂರ ಹೋಗಿ ಕಂಬದ ಗೋಡೆಗೆ ಕಾಗದ ಹಿಡಿದು ನನ್ನ ಆ ಪೆನ್ನನ್ನು ಮೇಲುಮುಖ ಮಾಡಿ, ವಿಳಾಸವೇನು, ಕಾಗದವನ್ನೇ ಬರೆಯಲಾರಂಭಿಸಿರಬೇಕು-ನನ್ನ ಗಮನಕ್ಕೆ ಬಾರದೆ. ತುಸು ಹೊತ್ತಿಗೆ ಹತ್ತಿರ ಬಂದವನೇ 'ಇದೇನು ಸರ್, ನಿಮ್ಮ ಪೆನ್ನು ಚೆನ್ನಾಗಿಲ್ಲ' ಎಂದು ಮರಳಿಸಬೇಕೆ? ಆಗ